## ನಿಮಗೆಷ್ಟು ಗೊತ್ತು

### ವಾರದ ಕೊನೆಯ ದಿನ

ವಾರಕ್ಕೆ ಏಳು ದಿನ ಎಂಬುದು ಜಗಜ್ಜನಿತ. ಆದರೆ ಆ ಏಳು ದಿನಗಳಲ್ಲಿ ಕೊನೆಯ ದಿನ ಯಾವುದು? ಯಹೂದಿಗಳ ನಂಬಿಕೆಯಂತೆ ದೇವರು ವಿಶ್ವವನ್ನು ಆರು ದಿನಗಳಲ್ಲಿ ಸೃಷ್ಟಿಸಿದನಂತೆ ಮತ್ತು ಒಂದು ದಿನ ವಿಶ್ರಾಂತಿ ಪಡೆದನಂತೆ. ಪುರಾತನ ರೋಮನ್ನರು ವಾರ ಹಾಗೂ ದಿನಗಳ ಆಲೋಚನೆಯನ್ನು ಹೊಂದಿರಲಿಲ್ಲ. ಅವರು ವಾರ, ತಿಂಗಳು ಹಾಗೂ ವರ್ಷಗಳನ್ನು ಕೆಲಸ ಮಾಡುವ ಹಾಗೂ ಕೆಲಸ ಮಾಡದ ದಿನಗಳನ್ನಾಗಿ ಸರಳವಾಗಿ ವಿಂಗಡಿಸಿಕೊಂಡಿದ್ದರು. ತದನಂತರ ಕ್ರೈಸ್ತ ಧರ್ಮದ ಬಗ್ಗೆ ಒಲವನ್ನು ಇರಿಸಿಕೊಂಡಿದ್ದ ಕಾನ್‌ಸ್ಟಾಂಟಿನ್ ಎಂಬ ಚಕ್ರವರ್ತಿಯು ವಾರಕ್ಕೆ ಏಳು ದಿನಗಳನ್ನು ನಿಗದಿಗೊಳಿಸಿದ್ದಲ್ಲದೇ ಕೊನೆಯ ದಿನವನ್ನು ಡೈಸ್ ಡೊಮೆನಿಕಾ ಎಂದು ಕರೆದನು. ಫ್ರೆಂಚ್ ಭಾಷೆಯಲ್ಲಿ ಡಿಮಾಂಚೆ ಎಂದರೆ ಭಾನುವಾರ ಎಂದರ್ಥ. ಆದರೆ ಆಧುನಿಕ ಕಾಲದಲ್ಲಿ ಭಾನುವಾರವನ್ನು ವಾರದ ಆದಿ ಎನ್ನಬೇಕೋ ಅಥವಾ ಅಂತ್ಯವೆನ್ನಬೇಕೋ ಎನ್ನುವ ವಿಚಾರದಲ್ಲಿ ಒಮ್ಮತವಿಲ್ಲ.

**-ಹರೀಶ್**

## ಪ್ರಕೃತಿ

ಎಲ್ಲಾ ಜೀವಿಗಳಿಗೆ ಆಶ್ರಯ
ನೀಡಿದೆ ಪ್ರಕೃತಿ
ಮಾನವ ತನ್ನ ಸ್ವಾರ್ಥಕ್ಕೆ
ಗಿಡ-ಮರಗಳನ್ನು
ಕಡಿದು ಮರೆತಿದ್ದಾನೆ
ಉಳಿಸಿ- ಬೆಳೆಸುವ ಸಂಸ್ಕೃತಿ

ಕಾಣುತ್ತಿಲ್ಲ ಇಂದು
ದಟ್ಟವಾದ ಕಾಡು
ಎಲ್ಲಿ ನೋಡಿದರೂ
ಕಾಂಕ್ರೀಟ್ ಕಾಡು

ಗಾಳಿ, ನೀರು, ಶಬ್ದ
ಎಲ್ಲವೂ ಆಗಿದೆ ಮಾಲಿನ್ಯ
ಇದಕ್ಕೆ ಮಾನವನ
ಕೊಡುಗೆ ಅನನ್ಯ

ಗಿಡ, ಮರಗಳನ್ನು
ಹೆಚ್ಚು ಹೆಚ್ಚು ಬೆಳೆಸೋಣ
ಹಸಿರೇ ಉಸಿರು
ಎಂದು ಸದಾ ನೆನಪಿಡೋಣ

**-ಈರಣ್ಣ ಬೆಂಗಾಲಿ, ರಾಯಚೂರು**






## ಠಕ್ಕ ನರಿಗೆ ತಕ್ಕ ಪಾಠ

ಅದೊಂದು ದೊಡ್ಡ ಕಾಡು. ಕ್ರೂರ ಮೃಗಗಳು ವಾಸಿಸುವ ಆ ಕಾಡಿನಲ್ಲಿ ಚೀಕು ನರಿಯು ವಾಸಿಸುತ್ತಿತ್ತು. ಅದಕ್ಕೆ ವಯಸ್ಸಾಗಿ ಬೇಟೆಯಾಡಲು ಶಕ್ತಿ ಸಾಲದೇ ಹಸಿವಿನಿಂದ ಬಳಲಿ ನಿತ್ರಾಣಗೊಂಡಿತ್ತು. ಆಹಾರಕ್ಕೆ ಏನು ಮಾಡುವುದೆಂದು ತಿಳಿಯದೇ ಹಸಿವಿನಿಂದ ಕಂಗಾಲಾಗಿ ಬಿಟ್ಟಿತ್ತು.

ಅದೊಂದು ದಿನ ಆಯಾಸದಿಂದ ಮಲಗಿದ್ದ ಚೀಕು ನರಿಗೆ ಉಪಾಯವೊಂದು ಹೊಳೆಯಿತು. ಖಾವಿ ಬಟ್ಟೆಯನ್ನು ಧರಿಸಿ ಸನ್ಯಾಸಿಯಂತೆ ನಟಿಸಿ ಪ್ರಾಣಿಗಳನ್ನು ತನ್ನ ಬಳಿ ಬರುವಂತೆ ಮಾಡುವುದು, ಅವುಗಳಲ್ಲಿ ಒಂದೊಂದನ್ನೇ ತಿನ್ನುತ್ತಾ ಹಸಿವನ್ನು ನೀಗಿಸಿಕೊಳ್ಳುವುದು. ಯೋಚನೆ ಬಂದಿದ್ದೇ ತಡ, ಚೀಕು ನರಿ ಗೆಲುವಾಯಿತು. ಅದರಂತೆ ಖಾವಿ ಬಟ್ಟೆಯನ್ನು ಧರಿಸಿ ಒಂದು ಮರದ ಕೆಳಗೆ ಧ್ಯಾನ ಮನಸ್ಕನಾಗಿ ಕುಳಿತೇ ಬಿಟ್ಟಿತು.

ಎಲ್ಲಾ ಪ್ರಾಣಿಗಳು ಅದನ್ನು ಆಶ್ಚರ್ಯದಿಂದ ನೋಡತೊಡಗಿದವು. ಹತ್ತಿರ ಹೋಗಲು ಭಯವಾಗಿ ದೂರದಿಂದಲೇ ನಿಂತು ನೋಡತೊಡಗಿದವು. ಹೀಗೇ ಪ್ರಾಣಿಗಳೆಲ್ಲ ಗುಂಪಾಗಿ ಕಾಣತೊಡಗಿದ್ದೇ ಎಲ್ಲವನ್ನೂ ಹತ್ತಿರ ಸೆಳೆಯಲು ಆಧ್ಯಾತ್ಮಿಕ ಧಾಟಿಯಲ್ಲಿ 'ಎಲ್ಲರೂ ದೇವರನ್ನು ನಂಬಬೇಕು. ಎಲ್ಲರಲ್ಲೂ ದೇವರು ಇರುತ್ತಾನೆ. ಆದ್ದರಿಂದ ಇನ್ನೊಬ್ಬರನ್ನು ಹಿಂಸಿಸುವುದು, ಸಾಯಿಸುವುದು ತಪ್ಪು. ಸದಾ ಭಗವಂತನನ್ನು ನೆನೆಯಿರಿ. ಅವನನ್ನು ಇನ್ನೊಬ್ಬರಲ್ಲಿ ಕಾಣುವುದರಲ್ಲಿ ನೆಮ್ಮದಿ ಹೊಂದಿ. ಸದಾ ದೇವರ ಧ್ಯಾನದಲ್ಲಿ ಮಗ್ನರಾಗಿದ್ದರೆ ಹಸಿವೇ ಆಗದು. ಬೇಕೆನಿಸಿದರೆ ಹಣ್ಣು- ಹಂಪಲುಗಳನ್ನು ತಿನ್ನಿ' ಎಂದು ಶಾಂತವಾಗಿ ನುಡಿಯುತ್ತಾ ಎಲ್ಲಾ ಪ್ರಾಣಿಗಳನ್ನು ತನ್ನ ಬಳಿ ಸೆಳೆಯುವಲ್ಲಿ ಯಶಸ್ವಿಯಾಯಿತು. ಹಾಗೇ ದಿನಕ್ಕೊಂದು ಸಣ್ಣ ಸಣ್ಣ ಪ್ರಾಣಿಗಳನ್ನು ತಿನ್ನುತ್ತಾ ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ವರ್ತಿಸುತ್ತಿತ್ತು.

ಹೀಗಿರಲೊಂದು ದಿನ ಟಿಂಕು ಮೊಲ, ಹೊರಕ್ಕೆ ಹೋಗಿದ್ದ ತನ್ನ ತಾಯಿ ಎಷ್ಟೊತ್ತಾದರೂ ಮರಳಿ ಬಾರದಿರುವುದನ್ನು ಕಂಡು ಅದನ್ನು ಹುಡುಕಿಕೊಂಡು ಆಶ್ರಮದತ್ತ ಬಂದಿತು. ಸನ್ಯಾಸಿಯ ಬಳಿ ತನ್ನ ಅಳಲನ್ನು ತೋಡಿಕೊಂಡಿತು. 'ಎಲ್ಲೋ ದಾರಿ ತಪ್ಪಿರಬಹುದು, ಬಂದೇ ಬರುತ್ತಾರೆ. ನೀನು ಮನೆಗೆ ಹೋಗು' ಎಂದು ಕಳ್ಳ ನೋಟ ಬೀರಿ ಕಣ್ಣು ಮುಚ್ಚಿ ಕುಳಿತಿತ್ತು.